# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 285

**5 ನವೆಂಬರ್ 2025 * ಬುಧವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ದ್ವಂದ್ವ ಗಾಯನ



**ಚಿಲಕುಂದ ಸೋದರಿಯರು**

ವಿದುಷಿ ಲಕ್ಷ್ಮಿ ನಾಗರಾಜ್ ಮತ್ತು ವಿದುಷಿ ಇಂದು ನಾಗರಾಜ್



ವಿದುಷಿ ಅದಿತಿ ಕೃಷ್ಣಪ್ರಕಾಶ್
ವಯೊಲಿನ್



ವಿದ್ವಾನ್ ಹೆಚ್. ಹರಿಹರನ್
ಮೃದಂಗ



ವಿದ್ವಾನ್ ಶಮಿತ್ ಎಸ್. ಗೌಡ
ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದುಷಿ ಲಕ್ಷ್ಮಿ ನಾಗರಾಜ್ ಮತ್ತು ವಿದುಷಿ ಇಂದು ನಾಗರಾಜ್‌ರವರು** ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ತಂದೆ ಶ್ರೀ ಸಿ.ಎ. ನಾಗರಾಜ್‌ರವರು ಗಾಯನದಲ್ಲಿ ಮತ್ತು ಕೊಳಲು ವಾದನದಲ್ಲಿ ನಿಪುಣರು. ತಾಯಿ ಶ್ರೀಮತಿ ಎಚ್.ಎಸ್. ರಾಧಾ ಸ್ವತಃ ಸಂಗೀತಗಾರರು. ಲಕ್ಷ್ಮಿ ಮತ್ತು ಇಂದುರವರು "ಚಿಲಕುಂದ ಸೋದರಿಯರು" ಎಂದು ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ. ಸುಮಾರು ಮೂರು ವರ್ಷದವರಾಗಿದ್ದಾಗಲೇ ಅಜ್ಜಿ ಶ್ರೀಮತಿ ಸಿ.ಎಸ್. ಸತ್ಯಲಕ್ಷ್ಮಿಯವರಿಂದ ಪ್ರಾರಂಭಿಕ ಸಂಗೀತ ಶಿಕ್ಷಣ. ಎಳೆಯ ವಯಸ್ಸಿನಲ್ಲಿಯೇ ಹಲವಾರು ಪ್ರಶಸ್ತಿಗಳ ಗಳಿಕೆ. ಒಂಬತ್ತನೆಯ ವಯಸ್ಸಿಗೇ ಕಚೇರಿ ನೀಡಿದ್ದಲ್ಲದೆ ಹಲವಾರು ದೂರದರ್ಶನ ವಾಹಿನಿಗಳಲ್ಲಿ ಕಾರ್ಯಕ್ರಮ ನೀಡಿರುವರು. ಸುಪ್ರಸಿದ್ಧ ಸಂಗೀತ ದಿಗ್ಗಜರೊಡನೆ ವೇದಿಕೆ ಹಂಚಿಕೊಂಡಿದ್ದಾರೆ. ಕನ್ನಡ ಚಲನಚಿತ್ರ ಮತ್ತು ಕಿರುತೆರೆಗಳಲ್ಲಿ ಹಿನ್ನೆಲೆ ಗಾಯಕರಾಗಿ ಹಾಡಿದ್ದಾರೆ.

ಶ್ರೀ ಎಸ್.ಪಿ. ಬಾಲಸುಬ್ರಹ್ಮಣ್ಯಂರವರು ನಡೆಸಿಕೊಟ್ಟ ಈ ಟಿವಿ ವಾಹಿನಿಯ "ಎದೆ ತುಂಬಿ ಹಾಡುವೆನು" ಕಾರ್ಯಕ್ರಮದಲ್ಲಿ ಇವರುಗಳು 2005 ಮತ್ತು 2006ನೇ ಸಾಲಿನಲ್ಲಿ ಸತತವಾಗಿ ವಿಜಯಿಗಳಾಗಿದ್ದಾರೆ. ಜೀ ವಾಹಿನಿಯ "ಸರಿಗಮಪ" ಸಂಗೀತ ಕಾರ್ಯಕ್ರಮದಲ್ಲಿ "ಮೆಂಟರ್" ಆಗಿಯೂ ಕಾರ್ಯ ನಿರ್ವಹಿಸಿರುವರು. ಕರ್ನಾಟಕ ಸಂಗೀತಕ್ಕೆ ನೀಡಿದ ಕೊಡುಗೆಗಾಗಿ 2009ರಲ್ಲಿ ಆರ್ಯಭಟ ಪ್ರಶಸ್ತಿ ಲಭಿಸಿದೆ.

ವಿದುಷಿ ಲಕ್ಷ್ಮಿ ನಾಗರಾಜ್‌ರವರು ಕರ್ನಾಟಕ ಸಂಗೀತದಲ್ಲಿ ಆಕಾಶವಾಣಿಯ "ಎ" ಶ್ರೇಣಿ, ಹಿಂದೂಸ್ತಾನಿ ಸಂಗೀತದಲ್ಲಿ ಬಿ–ಹೈ ಶ್ರೇಣಿ ಕಲಾವಿದರು; ಸುಗಮ ಸಂಗೀತದಲ್ಲಿ ಎ–ಟಾಪ್ ಶ್ರೇಣಿ ಮತ್ತು ದೇವರನಾಮ ಹಾಡುವಿಕೆಯಲ್ಲಿ ಬಿ–ಹೈ ಶ್ರೇಣಿ ಸಹ ಲಭಿಸಿದೆ. ಹಿಂದೂಸ್ತಾನಿ ಸಂಗೀತದಲ್ಲಿ ಪಂ. ಪರಮೇಶ್ವರ ಹೆಗಡೆಯವರು ಇವರ ಗುರುಗಳು. ರಾಷ್ಟ್ರೀಯ ಸಂಗೀತ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಾರೆ. ಸ್ವರಸಾಮ್ರಾಟ್ ಬಸವರಾಜ ರಾಜಗುರು ಪ್ರಶಸ್ತಿ ಗಳಿಸಿರುವರು.

ವಿದುಷಿ ಇಂದು ನಾಗರಾಜ್‌ರವರು ಚಲನಚಿತ್ರ ಸಂಗೀತಕ್ಕಾಗಿ ಫಿಲಂ ಫೇರ್ ಪ್ರಶಸ್ತಿ, ಉದಯ ಫಿಲಂ ಪ್ರಶಸ್ತಿ, ರೇಡಿಯೋ ಮಿರ್ಚಿ ಪ್ರಶಸ್ತಿ, ಬಿಗ್ ಎಫ್‌ಎಂ ಪ್ರಶಸ್ತಿ ಮತ್ತು ಟೈಮ್ಸ್ ಆಫ್ ಇಂಡಿಯಾ ಪ್ರಶಸ್ತಿಗಳಿಗೆ ಭಾಜನರು. ಸುಮಾರು 500ಕ್ಕೂ ಹೆಚ್ಚು ಚಿತ್ರಗೀತೆಗಳನ್ನು ಹಾಡಿದ್ದಾರೆ. ಕಲರ್ಸ್ ಟಿ.ವಿ. ವಾಹಿನಿಯ "ಹಾಡು ಕರ್ನಾಟಕ"ದ ತೀರ್ಪುಗಾರರಲ್ಲೊಬ್ಬರು.

**ವಿದುಷಿ ಅದಿತಿ ಕೃಷ್ಣಪ್ರಕಾಶ್‌ರವರು** ಪ್ರತಿಭಾನ್ವಿತ ವಯೊಲಿನ್ ಕಲಾವಿದರಲ್ಲೊಬ್ಬರು. ನಾಲ್ಕನೆಯ ವಯಸ್ಸಿನಿಂದಲೇ ಖ್ಯಾತ ವಿದ್ವಾಂಸ ಶ್ರೀ ಎಚ್.ಕೆ. ನರಸಿಂಹಮೂರ್ತಿ ಮತ್ತು ಶ್ರೀ ಆರ್.ಕೆ. ಶ್ರೀರಾಮಕುಮಾರ್ ಅವರ ಬಳಿ ಶಿಷ್ಯವೃತ್ತಿ ಮಾಡಿದರು. ಸುಂದರ ನುಡಿಸಾಣಿಕೆ, ನಾದಸೌಷ್ಠವ ಮತ್ತು ಕಲಾತ್ಮಕತೆಗಳ ಮೂಲಕ ಅಖಿಲ ಭಾರತ ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರಾಗಿದ್ದಾರೆ. ಏಕವ್ಯಕ್ತಿ ವಾದಕರಾಗಿ ಮತ್ತು ಸಾಥೀದಾರರಾಗಿ ಅತ್ಯಂತ ಬೇಡಿಕೆಯುಳ್ಳ ಕಲಾವಿದರು. ದೇಶವಿದೇಶಗಳಲ್ಲಿ ಕಲಾಪ್ರಾವೀಣ್ಯವನ್ನು ಮೆರೆದಿದ್ದಾರೆ. ಸಂಗೀತಕ್ಷೇತ್ರದ ದಿಗ್ಗಜರೊಂದಿಗೆ ನಾದಸಂವಾದವನ್ನು ಮುಂದುವರಿಸುತ್ತಿದ್ದಾರೆ ಮತ್ತು ವಯೊಲಿನ್‌ನಲ್ಲಿ ಸಹಕಾರ ನೀಡುತ್ತಿದ್ದಾರೆ.

**ವಿದ್ವಾನ್ ಹೆಚ್. ಹರಿಹರನ್‌ರವರು** ಚೆನ್ನೈ ಮೂಲದ ಪ್ರಖ್ಯಾತ ಮೃದಂಗ ಕಲಾವಿದರು. ಹಿರಿಯ ವಿದ್ವಾಂಸರಾದ ಶ್ರೀ ಪತ್ರಿ ಸತೀಶ್‌ಕುಮಾರ್‌ರವರ ಬಳಿ ಕಳೆದ ಹತ್ತು ವರ್ಷಗಳಿಂದಲೂ ಲಯಸಾಧನೆ ಮಾಡುತ್ತಿದ್ದಾರೆ. ಚೆನ್ನೈ ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರು. ಹತ್ತನೆಯ ವರ್ಷದಿಂದಲೇ ಈ ಕ್ಷೇತ್ರದಲ್ಲಿ ಸಕ್ರಿಯವಾಗಿರುವರು. ವಿದ್ವಾಂಸರಾದ ಶ್ರೀ ಅಭಿಷೇಕ್ ರಘುರಾಂ, ಶ್ರೀ ಶಶಾಂಕ್ ಸುಬ್ರಹ್ಮಣ್ಯಂ, ಚಿತ್ರವೀಣಾ ಎನ್. ರವಿಕಿರಣ್, ಶ್ರೀ ಲಾಲ್‌ಗುಡಿ ಜಿ.ಜೆ.ಆರ್. ಕೃಷ್ಣನ್, ಹೈದರಾಬಾದ್ ಸಹೋದರರು, ಉಸ್ತಾದ್ ಶಹೀದ್ ಪರ್ವೇಜ್ ಮುಂತಾದವರುಗಳೊಡನೆ ವೇದಿಕೆ ಹಂಚಿಕೊಂಡಿದ್ದಾರೆ.

**ವಿದ್ವಾನ್ ಶಮಿತ್ ಎಸ್. ಗೌಡರವರು** ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ ಮತ್ತು ವಿದ್ವಾನ್ ಗಿರಿಧರ್ ಉಡುಪರವರ ಶಿಷ್ಯರು. ಕರ್ನಾಟಕ ರಾಜ್ಯಮಟ್ಟದ ತಾಳವಾದ್ಯ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವಿದ್ಯಾರ್ಥಿವೇತನ ಪಡೆದ ಪ್ರತಿಭಾನ್ವಿತರು. ಹಲವಾರು ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಘಟಂ ವಾದನವನ್ನು ಪ್ರಸ್ತುತಿಪಡಿಸಿದ್ದಾರೆ. ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿ ಆಯೋಜಿಸಿದ್ದ ‘ಸ್ಪಿರಿಟ್ ಆಫ್ ಯುವಜನೋತ್ಸವ’ದಲ್ಲಿ ಭಾಗವಹಿಸಿದ್ದರು. ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಪ್ರವೃತ್ತಿಯಲ್ಲಿ ಕಲಾವಿದರು.

## ಬೆಳದಿಂಗಳ ಸಂಗೀತ 286

**4 ಡಿಸೆಂಬರ್ 2025**



**ಗಾಯನ**

**ವಿದುಷಿ ಬಿ.ಎನ್. ಗಾಯತ್ರಿ ದೇವಿ**

**ವಯೊಲಿನ್**

**ವಿದ್ವಾನ್ ತುಮಕೂರು ಯಶಸ್ವಿ**





**ಮೃದಂಗ**

**ವಿದ್ವಾನ್ ವಿಕ್ರಮ್ ಭಾರದ್ವಾಜ್**

**ಮೋರ್ಚಿಂಗ್**

**ವಿದ್ವಾನ್ ಆರ್. ದಾಸಪ್ಪ**



☎ 0821–2548221, 2548223 * sutturmath@jssonline.org